ಝೆನ್‌ಗುರು ಮಾ–ತ್ಸು ಇನ್ನೂ ಸಾಧನೆಯಲ್ಲಿ ತೊಡಗಿದ್ದಾಗ ನಡೆದ ಘಟನೆ ಇದು.

ಮಾ–ತ್ಸು ಏಕಾಂತದಲ್ಲಿ ಸದಾ ಧ್ಯಾನದಲ್ಲಿ ತೊಡಗಿರುತ್ತಿದ್ದ. ಮನಸ್ಸನ್ನು ಶುದ್ಧಸ್ಥಿತಿಯಲ್ಲಿ ನಿಲ್ಲಿಸಬೇಕೆಂಬ ಹಟ ಅವನದ್ದು. ಗುರುಗಳು ಒಮ್ಮೆ ಅವನನ್ನು ಪ್ರಶ್ನಿಸಿದರು:

'ನೀನು ಅಷ್ಟು ಹೊತ್ತು ಧ್ಯಾನಮುದ್ರೆಯಲ್ಲೇ ಇರುವೆಯಲ್ಲ, ಯಾಕೆ?'

'ಬುದ್ಧನಾಗುವ ಹಂಬಲ ನನ್ನದು'–ಮಾ–ತ್ಸು ಉತ್ತರಿಸಿದ.

ಈ ಮಾತನ್ನು ಕೇಳಿದ ಗುರುಗಳು ಅಲ್ಲೇ ಹತ್ತಿರದಲ್ಲಿ ಬಿದ್ದಿದ್ದ ಹೆಂಚೊಂದನ್ನು ತೆಗೆದುಕೊಂಡರು; ಅದನ್ನು ಕಲ್ಲಿನಿಂದ ಉಜ್ಜತೊಡಗಿದರು. ಶಿಷ್ಯನಿಗೆ ಗುರುಗಳು ಏನು ಮಾಡುತ್ತಿದ್ದಾರೆಂದು ತಿಳಿಯಲಿಲ್ಲ. ಅವನು ಆಶ್ಚರ್ಯದಿಂದಲೇ ಕೇಳಿದ:

'ಗುರುಗಳೇ ಏನು ಮಾಡುತ್ತಿದ್ದೀರಿ?'

'ಹೆಂಚನ್ನು ಕಲ್ಲಿನಿಂದ ಉಜ್ಜಿ ಕನ್ನಡಿಯನ್ನಾಗಿ ಮಾಡುತ್ತಿದ್ದೇನೆ, ಶಿಷ್ಯ' – ಗುರುಗಳು ಸಮಾಧಾನವಾಗಿ ಹೀಗೆಂದು ಹೇಳಿ, ಉಜ್ಜುವುದನ್ನು ಮುಂದುವರಿಸಿದರು.

ಶಿಷ್ಯನಿಗೆ ನಗುವನ್ನು ತಡೆಯಲಾಗಲಿಲ್ಲ. ನಗುತ್ತಲೇ ಕೇಳಿದ:

'ಗುರುಗಳೇ! ಹೆಂಚನ್ನು ಕನ್ನಡಿ ಮಾಡಲು ಆದೀತೆ?!'

'ಹೌದು! ನೀನು ಮನಸ್ಸನ್ನು ಶುದ್ಧವಾಗಿಸುವ ಮೂಲಕ ಹೇಗೆ ಬುದ್ಧನಾಗಬಲ್ಲೆ, ಹೇಳು?' ಎಂದರು, ಗುರುಗಳು ಆ ಕೂಡಲೇ.

ಶಿಷ್ಯನಿಗೆ ಗುರುಗಳ ಮಾತಿನ ಇಂಗಿತ ತಿಳಿಯಿತು; ಬಳಿಕ ಜ್ಞಾನೋದಯವೂ ಒದಗಿತು. ಅವನು ಜೀವನದುದ್ದಕ್ಕೂ ತನ್ನ ಶಿಷ್ಯರಿಗೆ ಈ ಸಂಭಾಷಣೆಯ ಸವಿಯನ್ನು ಉಣಬಡಿಸುತ್ತಲೇ ಇದ್ದನಂತೆ.

★★★

**ಬುದ್ಧತ್ವದ ಬಗ್ಗೆ ನಮಗೆ ಏನೇನೂ ರಮ್ಯವಾದ ಊಹೆಗಳಿರುತ್ತವೆ; ತಳಪಾಯಗಳಿಲ್ಲದ ಅಂಥ ನಿಲುವುಗಳನ್ನು ಗೇಲಿ ಮಾಡುವಂತಿದೆ ಈ ಕತೆ.**

**ಒಟ್ಟು ಅಧ್ಯಾತ್ಮದ ಬಗ್ಗೆಯೇ ನಮ್ಮ ಗ್ರಹಿಕೆಯಲ್ಲಿ ಸಮಸ್ಯೆಗಳಿವೆ. ಅಧ್ಯಾತ್ಮ ಎನ್ನುವುದು ನಮಗೆ ವಿಶೇಷವೂ ವಿಚಿತ್ರವೂ ಆದ ಶಕ್ತಿಗಳನ್ನು ದಯಪಾಲಿಸುವ ಮಂತ್ರದಂಡ ಎಂದು ಅಂದುಕೊಂಡಿದ್ದೇವೆ. ಬಹಳಷ್ಟು ಜನರು ಅಧ್ಯಾತ್ಮದ ಸಾಧನೆಗೆ ತೊಡಗುವುದು ಕೂಡ ಇಂಥ ಶಕ್ತಿಗಳನ್ನು ಬಯಸಿಯೇ ಹೌದು. ಅಧ್ಯಾತ್ಮದಲ್ಲಿ ಸ್ವರ್ಗಸುಖವೇ ಇದೆ ಎಂಬ ಆಸೆ ನಮ್ಮದು. ಬುದ್ಧತ್ವ ಎಂದರೆ ಸದಾ ಸಿಹಿಯೂಟದ ಔತಣ, ಸುಖದ ಅಮಲು ಎಂಬ ಎಣಿಕೆ ನಮ್ಮದು. ಆದರೆ ಅಧ್ಯಾತ್ಮಕ್ಕೂ ಈ ಲೆಕ್ಕಾಚಾರಕ್ಕೂ ಸಂಬಂಧವಿಲ್ಲವೆನ್ನಿ!**

**ಸಿದ್ಧಾರ್ಥ ಬುದ್ಧನಾದ ಕತೆ ನಮಗೆ ಗೊತ್ತಿದೆಯಷ್ಟೆ. ಬುದ್ಧನಾದ ಮೇಲೆ ಅವನು ಯಶೋಧರೆಯನ್ನು ಮೊದಲ ಬಾರಿಗೆ ಭೇಟಿ ಮಾಡಿದ ಸಂದರ್ಭ. ಆಗ ಬುದ್ಧನನ್ನು**